ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

2

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿಗಳು

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 25/12/20

ನವ ರಾತ್ರಿ ಕರ್ಫ್ಯೂ

ಆದೇಶ ದಿಢೀರ್ ರದ್ದುಗೊಳಿಸಿದ ಸರ್ಕಾರ

ಬೆಂಗಳೂರು: ಡಿ.24ರಿಂದ ಅನ್ವಯವಾಗುವಂತೆ 9 ದಿನಗಳ ರಾತ್ರಿ ಕರ್ಫ್ಯೂ ವಿಧಿಸಿ ಬುಧವಾರವಷ್ಟೇ ಆದೇಶ ಹೊರಡಿಸಿದ್ದ ರಾಜ್ಯ ಸರ್ಕಾರ, ಗುರುವಾರ ಕರ್ಫ್ಯೂ ಜಾರಿಗೆ ಬರುವ ಮುನ್ನವೇ ದಿಢೀರೆಂದು ಪಾಪಸ್ ಪಡೆದಿದೆ.

ಪ್ರತಿಪಕ್ಷ ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಸಾರ್ವಜನಿಕ ವಲಯದಲ್ಲಿ ರಾತ್ರಿ ಕರ್ಫ್ಯೂಗೆ ತೀವ್ರ ಪ್ರತಿರೋಧ ವ್ಯಕ್ತವಾದ ಬೆನ್ನಲ್ಲೇ ಗುರುವಾರ ಸಂಜೆ ಸರ್ಕಾರ 'ರಾತ್ರಿ ಕರ್ಫ್ಯೂ' ಆದೇಶ ರದ್ದುಗೊಳಿಸುವ ತೀರ್ಮಾನ ಕೈಗೊಂಡಿತು.

ಸರ್ಕಾರದ ಈ ಕ್ರಮವೂ ಟೀಕೆಗೆ ಗುರಿಯಾಗಿದ್ದು ಮತ್ತು ಹಾಗೂ ಗೊಂದಲದ ತೀರ್ಮಾನದ ಬಗ್ಗೆ ಸರ್ಕಾರದೊಳಗಿನವರಿಂದಲೇ ಆಕ್ಷೇಪವೂ ವ್ಯಕ್ತವಾಗಿ ಒಟ್ಟಾರೆ 'ರಾತ್ರಿ ಕರ್ಫ್ಯೂ' ತೀರ್ಮಾನ ಒಂದು ರೀತಿ ಪ್ರಹಸನ ಎಂಬಂತಾಯಿತು.

ಕರ್ಫ್ಯೂ ಆದೇಶ ಹಿಂಪಡೆದರೂ ಸಾರ್ವಜನಿಕವಾಗಿ ಹೊಸ ವರ್ಷಾಚರಣೆ, ಪಬ್, ಬಾರ್, ರೆಸ್ಟೋರೆಂಟ್, ರೆಸಾರ್ಟ್‌ಗಳಲ್ಲಿ ಪಾರ್ಟಿ ಆಯೋಜನೆಗೆ ಅವಕಾಶವಿಲ್ಲ ಎಂದೂ ಸರ್ಕಾರ ಸ್ಪಷ್ಟ ಪಡಿಸಿದೆ. ಈ ಹಿಂದಿನ ಆದೇಶದಂತೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವಿಕೆ, ಸೀಮಿತ ಜನರಿಗಷ್ಟೇ ಪ್ರವೇಶಾವಕಾಶ ಮತ್ತಿತರ ಮಾರ್ಗಸೂಚಿಗಳಲ್ಲಿ ಬದಲಾವಣೆ ಮಾಡಲಾಗಿಲ್ಲ. ಈ ಬಗ್ಗೆ ಪೊಲೀಸ್ ಇಲಾಖೆ ನಿಗಾ ವಹಿಸಲಿದೆ.

ಟೀಕೆಗಳ ಸುರಿಮಳೆ: ಇದಕ್ಕೂ ಮುನ್ನ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅದರು, ಇದೊಂದು ಹುಚ್ಚು ತೀರ್ಮಾನ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾತ್ರಿ ವೇಳೆ ಮಾತ್ರ ಕೊರೊನಾ ಹರಡುತ್ತಾ? ಹಗಲು ಹರಡುವುದಿಲ್ಲವಾ? ಬಿಜೆಪಿ ಜನರ ಅಭಿಪ್ರಾಯಕ್ಕೆ ಬೆಲೆ ಕೊಡುತ್ತಿಲ್ಲ, ಸರ್ಕಾರವನ್ನು ತನ್ನ ಖಾಸಗಿ ಆಸ್ತಿ ಎಂಬಂತೆ ನಡೆದುಕೊಳ್ಳುತ್ತಿದೆ ಎಂದು ದೂರಿದ್ದರು. ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ, ಎಲ್ಲ ರೀತಿಯ ವಾಹನಗಳ ಓಡಾಟಕ್ಕೆ ಅವಕಾಶ ನೀಡಿ, ಖಾಸಗಿ(ಸ್ವಂತ) ವಾಹನ ಬೇಡ ಎಂದು ಹೇಳುವುದು, ಬೆಳಗ್ಗಿನಿಂದ ರಾತ್ರಿಯವರೆಗೂ ಅವಕಾಶ ನೀಡಿ, ನಂತರ ನಿರ್ಬಂಧ ಹೇರುವ ಕರ್ಫ್ಯೂಗೆ ಅರ್ಥವೇ ಇಲ್ಲ ಎಂದಿದ್ದರು.

> ಸಾರ್ವಜನಿಕರು, ಸಚಿವರು, ಹಿರಿಯ ಅಧಿಕಾರಿಗಳ ಅಭಿಪ್ರಾಯದ ಮೇರೆಗೆ ರಾತ್ರಿ ಕರ್ಫ್ಯೂ ನಿರ್ಧಾರ ಹಿಂಪಡೆದಿದ್ದೇವೆ. ಕ್ರಿಸ್‌ಮಸ್, ಹೊಸ ವರ್ಷವನ್ನು ಸರಳವಾಗಿ ಆಚರಿಸಿ. ಸ್ವಯಂ ನಿರ್ಬಂಧ ವಿಧಿಸಿಕೊಂಡು ಮಾಸ್ಕ್ ಧರಿಸಿ. ಅನಗತ್ಯವಾಗಿ ಸಂಚರಿಸಬೇಡಿ.
>
> ಬಿ.ಎಸ್.ಯಡಿಯೂರಪ್ಪ, ಸಿಎಂ

ಗೃಹ ಸಚಿವರೇಕೆ ಮೌನ?

ಲಾಕ್‌ಡೌನ್ ಅಥವಾ ರಾತ್ರಿ ಕರ್ಫ್ಯೂ ತೀರ್ಮಾನದ ಪಾಲನೆಯಲ್ಲಿ ಗೃಹ ಇಲಾಖೆ ಪ್ರಮುಖ ಪಾತ್ರ. ಆದರೆ, ರಾತ್ರಿ ಕರ್ಫ್ಯೂ ತೀರ್ಮಾನ ವಿಚಾರದಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅದರ ಜತೆ ಸಮಾಲೋಚನೆ ನಡೆಸಿರಲಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ಹೀಗಾಗಿ, ಈ ವಿಚಾರದಲ್ಲಿ ಬೊಮ್ಮಾಯಿ ಅದರು ಯಾವುದೇ ಪ್ರತಿಕ್ರಿಯೆ ನೀಡದ ಮೌನ ಸಹಿಸಿದ್ದರು ಎಂದು ಹೇಳಲಾಗಿದೆ.

ಸುಧಾಕರ್ ಏನು ಹೇಳಿದ್ದರು?

ಗುರುವಾರ ಮಧ್ಯಾಹ್ನವಷ್ಟೇ ಕರ್ಫ್ಯೂ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದ ಸಚಿವ ಡಾ.ಕೆ.ಸುಧಾಕರ್, ರಾತ್ರಿ ಕರ್ಫ್ಯೂ ವಿಚಾರದಲ್ಲಿ ಪ್ರತಿಪಕ್ಷಗಳು ಮನರಂಜನೆಗಾಗಿ ಮಾತನಾಡಬಾರದು. ರಾತ್ರಿ ಆರೇಳು ಗಂಟೆ ನಿರ್ಬಂಧ ಹೇರಿದರೆ ಪಬ್-ಕ್ಲಬ್‌ಗಳಲ್ಲಿ ಜನ ಸೇರುವುದು ಕಡಿಮೆಯಾಗಿ ವೈರಾಣು ಹರಡುವುದು ತಪ್ಪಿಸಬಹುದು. ಮೊದಲ ಕೋವಿಡ್ ಪೈರಸ್‌ಗೆ ಹೋಲಿಸಿದರೆ ರೂಪಾಂತರ ಕೋವಿಡ್ ಹರಡುವಿಕೆ ಪ್ರಮಾಣ ಶೇ.70 ರಷ್ಟು ಹೆಚ್ಚಾಗಿರುವುದರಿಂದ ಚರ್ಚಿಸಿಯೇ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದಿದ್ದರು.